ಪಯಣಿಸುತ್ತಿದ್ದರೆ ಹೊನ್ನಾವರ ಸಮೀಪದ ಕಾಸರಕೋಡಿನ ಇಕೋ ಬೀಚ್ ಎದುರು ಭಾಗದಲ್ಲಿ, ಹೆದ್ದಾರಿಯ ಬಲಭಾಗದಲ್ಲಿ ಸಿಗಲಿದೆ. ಒಂದು ವೇಳೆ ಕುಮಟಾ–ಹೊನ್ನಾವರ ಕಡೆಯಿಂದ ಪಯಣಿಸುತ್ತಿದ್ದರೆ, ಎಡಭಾಗದಲ್ಲೇ 'ಕಾಂಡ್ಲಾ ನಡಿಗೆ' ಎಂಬ ಕಮಾನು ಕಾಣಿಸುತ್ತದೆ. ಆ ಕಮಾನು ದಾಟಿ ಸ್ವಲ್ಪವೇ ಮುಂದೆ ಹೋಗಿ ಎಡಕ್ಕೆ ತಿರುಗಿ ಸಾಗಿದರೆ ಕಾಂಡ್ಲಾ ವನದ ಪ್ರವೇಶ ದ್ವಾರ ಕಾಣುತ್ತದೆ.

ಶತಮಾನದ ಅಂಚಿನಲ್ಲಿರುವ ಮೂರು ಬೃಹದಾಕಾರದ ಹೊಳೆ ಹೊನ್ನೆ ಮರಗಳ ನೆರಳು ತಂಪಿನ ಅನುಭವ ನೀಡುತ್ತವೆ. ತಲೆಗೆ 10 ರೂಪಾಯಿ ಶುಲ್ಕ ಕೊಟ್ಟು, ಅದೇ ನೆರಳಿನಡಿ SAVE MANGROVE ಎಂದು ಕೆಂಪಕ್ಷರಗಳಲ್ಲಿ ಬರೆದ ಫಲಕ ದಾಟಿದರೆ, 'ಶರಾವತಿ ಕಾಂಡ್ಲಾ ನಡಿಗೆ' (Mangrove Board Walk) ಎಂಬ ಬೋರ್ಡ್ ಸ್ವಾಗತಿಸುತ್ತದೆ. ಅತ್ತ–ಇತ್ತ ಶರಾವತಿಯ ಅಳಿವೆಯ ನೀರು, ಅದರ ಮೇಲೆ ಉದ್ದುದ್ದ ಬೇರು ಇಳಿಬಿಟ್ಟ ಕಾಂಡ್ಲಾ ಮರಗಳು. ಇವುಗಳ ನಡುವೆ ಕಟ್ಟಲಾದ ಮರದ ಹಲಗೆಗಳ ಹಾಸಿನ ಮೇಲೆ ಹೆಜ್ಜೆಯಿಟ್ಟು ಸಾಗುವುದು ವರ್ಣಿಸಲಾಗದ ವಿಶಿಷ್ಟ ಅನುಭವ.

ಈ ಕಾಂಡ್ಲಾ ನಡಿಗೆಯಲ್ಲಿ ಅಡಿಯಿಡುವಾಗ ಆಚೆ ಈಚೆ ಕಣ್ಣು ಹಾಯಿಸಿ, ಗಮನಿಸಿದಲ್ಲಿ ಒಂದಷ್ಟು ಮಾಹಿತಿಗಳು ನಮ್ಮ ಮಸ್ತಕ ಸೇರಲಿವೆ. ನೀರಿನ ಮೇಲೆ ತೇಲಾಡುವಂತಿರುವ ಕಾಂಡ್ಲಾದ ಬೇರುಗಳ ಬುಡದಲ್ಲಿ ಜೇಡಿಮಣ್ಣಿನ ಗುಡ್ಡೆಗಳಿವೆ. ನೀರಿನ ಭರತದಲ್ಲಿ ಅವು ಕಾಣದಿದ್ದರೂ, ಇಳಿತದ ವೇಳೆ ಗೋಚರಿಸಲಿವೆ. ಇದೇ ಮಣ್ಣಿನ ದಿಣ್ಣೆಗಳಲ್ಲಿ ಕೆಲವು ಅಪರೂಪದ ಜಾತಿಯ ಏಡಿ, ಮೀನುಗಳ ಸಂತಾನಾಭಿವೃದ್ಧಿ ನಡೆಯುತ್ತದೆ.

ಸರಿಸೃಪಗಳು, ಭೂ–ಜಲಚರಗಳು, ಪಕ್ಷಿಗಳ ಆಶ್ರಯದಾತ ಈ ಕಾಂಡ್ಲಾ ವನ. ಅಷ್ಟೇ ಅಲ್ಲ; ವಾತಾವರಣದಲ್ಲಿನ ಇಂಗಾಲದ ಡೈ ಆಕ್ಸೈಡ್ ಹೆಚ್ಚು ಹೀರಿಕೊಳ್ಳುವ ಸಾಮರ್ಥ್ಯ ಕಾಂಡ್ಲಾಕ್ಕಿದೆ. ಸಮುದ್ರಕೊರೆತ, ಸುನಾಮಿ ತಡೆಯುವ ತಡೆಗೋಡೆಯಾಗಿಯೂ ಕಾಂಡ್ಲಾ ವನ ಕಾರ್ಯನಿರ್ವಹಿಸುತ್ತವೆ. ಮರದ ಕಾಂಡದ ಸುತ್ತಲೂ ಇಳಿಯುವ ಬೇರುಗಳು ಅಕ್ಕಪಕ್ಕದ ಜಾಗವನ್ನು ಆವರಿಸುವುದರಿಂದ ಈ ಗಿಡ–ಮರಗಳು ನೀರಿನ ಮೇಲೆ ಚಲಿಸುವಂತೆ ಭಾಸವಾಗುತ್ತವೆ. ಇದೇ ಕಾರಣಕ್ಕೆ 'ನಡೆದಾಡುವ ಮರಗಳು' ಎಂಬ ಅನ್ವರ್ಥಕ ನಾಮವೂ ಇವಕ್ಕಿದೆ.

ಕಾಂಡ್ಲಾ ಹೂ ಬಿಟ್ಟು, ಕಾಯಿಯಾಗಿ ವಂಶಾಭಿವೃದ್ಧಿ ಹೊಂದುವ ಪ್ರಕ್ರಿಯೆಯ ವಿವರವುಳ್ಳ ಮಾಹಿತಿ ಫಲಕಗಳನ್ನು ಕಾಂಡ್ಲಾ ನಡಿಗೆಯ ಮಾರ್ಗದಲ್ಲಿ ಅಳವಡಿಸಿರುವುದರಿಂದ ಅವುಗಳ ಬಗ್ಗೆ ಹೆಚ್ಚಿನ ಜ್ಞಾನ ಸಿಗಲಿದೆ. ಕಾಂಡ್ಲಾ ಪ್ರಭೇದ, ಜಲ ಮತ್ತು ಗಾಳಿ ಪ್ಯೂರಿಫೈಯರ್ ಎಂಬ ಮಾಹಿತಿ ನಿಜಕ್ಕೂ ಅಚ್ಚರಿ ಮೂಡಿಸಿತು. ಸಮುದ್ರದ ನೀರನ್ನು ಶುದ್ಧೀಕರಿಸುವ ಪ್ರಾಕೃತಿಕ ವಿಧಾನ ಇಲ್ಲಿದೆ.

ಕಂಡೆಲಿಯ ಕಂಡೆಲ, ರೈಜೋಪೊರಾ ಅಪಿಕುಲಟಾ, ಸೊಪನೆರೆಶೀಯಾ ಆಲ್ಬಾ, ನೆರೆಶಿಯ ಕೆಶ್ಯೂಲರಿಸ್ ಎನ್ನುವ ನಾಲ್ಕು ಜಾತಿಯ ಕಾಂಡ್ಲಾ ಪ್ರಭೇದಗಳು ಇಲ್ಲಿನ ಕಾಂಡ್ಲಾವನದಲ್ಲಿವೆ. ಪೋರ್ಚುಗೀಸ್‌ನ ಮಾಂಗ್ಯೂ ಮತ್ತು ಇಂಗ್ಲಿಷ್‌ನ ಗ್ರೋವ್ ಸೇರಿ ಆದ ಮ್ಯಾಂಗ್ರೋ ಕನ್ನಡದಲ್ಲಿ ಕಾಂಡ್ಲಾ ಎಂಬ ಹೆಸರಿನಲ್ಲಿ ಕರೆಸಿಕೊಳ್ಳುತ್ತವೆ. ಸಮುದ್ರದ ಉಪ್ಪು ನೀರು, ನದಿಯ ಸಿಹಿ ನೀರು ಸೇರುವ ಅಳಿವೆ ಪ್ರದೇಶವೇ ಕಾಂಡ್ಲಾ ನೆಲೆವೀಡು.

ಭಾರತ ದೇಶದಲ್ಲಿ 4,700 ಚ.ಕಿ.ಮೀ. ಕಾಂಡ್ಲಾ ಪ್ರದೇಶವಿದ್ದು, ಅದರಲ್ಲಿ ಕರ್ನಾಟಕದ ಕರಾವಳಿಯಲ್ಲಿ 1,100 ಚ.ಕಿ.ಮೀ. ಪಾಲಿದೆ. ಅದರಲ್ಲಿ ಹೊನ್ನಾವರ ಅರಣ್ಯ ವಿಭಾಗದ ಕಾಸರಕೋಡಿನಲ್ಲಿ ₹18 ಲಕ್ಷ ವೆಚ್ಚದಲ್ಲಿ 750 ಮೀಟರ್ ಕಾಂಡ್ಲಾ ನಡಿಗೆಗೆ ಅನುವು ಮಾಡಲಾಗಿದೆ. ಕಾಂಡ್ಲಾ ನಡಿಗೆಗೆ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆಯೂ ಇದೆ.

'ವರ್ಷ ಪೂರ್ತಿ ಕಾಂಡ್ಲಾ ನಡಿಗೆಗೆ ಅವಕಾಶವಿದೆ. ಮಳೆಗಾಲದಲ್ಲೂ ಹವಾಮಾನಕ್ಕೆ ಅನುಗುಣವಾಗಿ ಪ್ರವೇಶಾವಕಾಶವಿದೆ' ಎಂದು ಅರಣ್ಯ ಇಲಾಖೆ ಹೊನ್ನಾವರ ವಿಭಾಗದ ಡಿಸಿಎಫ್ ರವಿಶಂಕರ್ ಮಾಹಿತಿ ನೀಡಿದರು.

ಜುಲೈ 26ರಂದು 'ವಿಶ್ವ ಕಾಂಡ್ಲಾ ಸಂರಕ್ಷಣಾ ದಿನಾಚರಣೆ'. ಅದರ ಅಂಗವಾಗಿ ಕಾಂಡ್ಲಾ ಸಸ್ಯ ಸಂರಕ್ಷಣೆ ಹಾಗೂ ಪ್ರಭೇದ ವೃದ್ಧಿಗಾಗಿ ಕಾಂಡ್ಲಾ ಹಬ್ಬ ಆಚರಿಸಲಾಗುವುದು ಎಂದು ರವಿಶಂಕರ್ ತಿಳಿಸಿದರು.

ಮಳೆದಿನಗಳಲ್ಲಿ ಪ್ರವಾಸ ಹೋಗುವುದು ಪ್ರಕೃತಿಯೊಂದಿಗಿನ ಆತ್ಮೀಯತೆ ಹೆಚ್ಚಿಸಿಕೊಳ್ಳುವ ದಾರಿಯೂ ಹೌದು. ಸಾಮಾನ್ಯವಾಗಿ 'ಮಳೆ ಪ್ರವಾಸ'ವೆಂದರೆ, ಭೋರ್ಗರೆವ ಜಲಪಾತಗಳನ್ನು ನೋಡಲು ಜನ ಕಿಕ್ಕಿರಿಯುತ್ತಾರೆ. ಮಳೆಯ ಹಾಡಿನೊಂದಿಗೆ, ಹಸಿರಿನ ಪಿಸುಮಾತುಗಳನ್ನೂ ಕೇಳಿಸಿಕೊಳ್ಳಲು 'ಕಾಂಡ್ಲಾ ವನ'ದ ಭೇಟಿ ಅವಕಾಶ ಒದಗಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in


ಹೊನ್ನಾವರ ತಾಲ್ಲೂಕಿನ ಕಾಸರಕೋಡಿನ ಕಾಂಡ್ಲಾ ನಡಿಗೆ


SANDHILIN सन्धिलिन
ಸಂಧಿಲಿನ್

ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!

ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY
ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ